ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಿಗೆ ಸರ್ಕಾರ ನೀಡಿದ ಅನುದಾನ.

71(133) ಶ್ರೀ ಬಸನಗೌಡ ರಾಮನಗೌಡ ಪಾಟೀಲ (ವಿಜಾಪುರ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96, 96-97 ಮತ್ತು 97-98ನೇ ಸಾಲುಗಳಲ್ಲಿ ನಗರಸಭೆಗಳಿಗೆ, ಪುರಸಭೆಗಳಿಗೆ ಹಾಗೂ ಪಟ್ಟಣದ ಪಂಚಾಯತಿಗಳಿಗೆ ಸರ್ಕಾರವು ನೀಡಿದ ಅನುದಾನದ ಮೊತ್ತ ಎಷ್ಟು? (ವರ್ಷವಾರು ವಿವರ ಒದಗಿಸುವುದು)

ಆ) ಅನುದಾನ ನೀಡುವಲ್ಲಿ ತಾರತಮ್ಯ ಮಾಡಲಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಮೀರಾಜುದ್ದೀನ್ ಎಸ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :—

ಅ) 1995-96 ರಲ್ಲಿ 126.38 ಕೋಟಿ,
1996-97 ರಲ್ಲಿ 142.19 ಕೋಟಿ ಮತ್ತು
1997-98 ರಲ್ಲಿ 283.84 ಕೋಟಿಗಳನ್ನು
ರಾಜ್ಯ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನವಾಗಿ ಬಿಡುಗಡೆ ಮಾಡಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆಯಲ್ಲಿ ಹೊಸದಾಗಿ ಮಂಜೂರಾಗಿರುವ ಸಕ್ಕರೆ ಕಾರ್ಖಾನೆಗಳು.

72(423) ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ವಿಜಾಪುರ) :— ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಹೊಸದಾಗಿ ಮಂಜೂರಾತಿ ನೀಡಿದ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು ;

ಆ) ಈ ರೀತಿ ಹೊಸದಾಗಿ ಮಂಜೂರಾದ ಸಕ್ಕರೆ ಕಾರ್ಖಾನೆಗಳಿಗೆ ಕೇಂದ್ರ-ಸರ್ಕಾರದ ಹೊಸ ನೀತಿಯಿಂದ ಆಗಲಿರುವ ಅನುಕೂಲಗಳೇನು (ವಿವರ ನೀಡುವುದು)

ಇ) ಪ್ರಸಕ್ತ ವರ್ಷ ವಿಜಾಪುರ ಜಿಲ್ಲೆಯಲ್ಲಿನ ಸಕ್ಕರೆ ಕಾರ್ಖಾನೆಗಳ ಕಬ್ಬು ಅರೆಯುವ ಸಾಮರ್ಥ್ಯ ಎಷ್ಟು?

ಶ್ರೀ ಹೆಚ್. ಶಿವಪ್ಪ (ಸಕ್ಕರೆ ಸಚಿವರು) :—

ಅ) ಬಿಜಾಪುರ ಜಿಲ್ಲೆಯಲ್ಲಿ ಹೊಸದಾಗಿ ಮಂಜೂರಾತಿ ನೀಡಲ್ಪಟ್ಟ ಸಕ್ಕರೆ ಕಾರ್ಖಾನೆಗಳು ಎರಡು

1. ಭೀಮಾಶಂಕರ್ ಸಹಕಾರ ಸಕ್ಕರೆ ಕಾರ್ಖಾನೆ (ನಿ), ಇಂಡಿ
2. ಮನಾಲಿ ಷುಗರ್ಸ್ ಲಿ. ಯಲಗೂರು, ಮುದ್ದೆಬಿಹಾಳ್ ತಾ:

ಆ) ಕೇಂದ್ರ ಸರ್ಕಾರದ ಹೊಸ ನೀತಿಯಿಂದ-

1. ಲೈಸನ್ಸಿಂಗ್ ಪದ್ಧತಿಯಿಂದ ವಿನಾಯಿತಿ ದೊರೆತಿದೆ.
2. ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಇರುವ ರೇಡಿಯರ್ ಅಂತರ 25ಕಿ.ಮೀ. ನಿಂದ 15 ಕಿ.ಮೀ. ಗೆ ಇಳಿಸಲಾಗಿದೆ.
3. ಡಿಸೆಂಬರ್ 1999 ರೊಳಗಾಗಿ ಉತ್ಪಾದನೆ ಆರಂಭಿಸುವ ಕಾರ್ಖಾನೆಗಳಿಗೆ 5 ವರ್ಷಗಳ ಕಾಲ ಲೆವಿಯಿಂದ ಮುಕ್ತ ಮಾಡಲಾಗಿದೆ.
4. ಹೊಸ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಖರೀದಿ ತೆರಿಗೆ ವಿನಾಯಿತಿಯನ್ನು ರಾಜ್ಯ ಸರ್ಕಾರವು 10 ವರ್ಷಗಳವರೆಗೆ ನೀಡಲಿದೆ.

ಇ) ಬಿಜಾಪುರ ಜಿಲ್ಲೆಯಲ್ಲಿ ಹಾಲಿ ನಂದಿ ಸಹಕಾರ ಸಕ್ಕರೆ ಕಾರ್ಖಾನೆ, ಚಿಕ್ಕ ಗಲಗಲಿ ಇವರು ಕಾರ್ಯನಿರ್ವಹಿಸುತ್ತಿದ್ದು, ದಿನವೊಂದಕ್ಕೆ 2500 ಟನ್ ಕಬ್ಬನ್ನು ಸುರಿಸಲಾಗುತ್ತಿದ್ದು ದಿನಾಂಕ: 5.11.98ರಿಂದ 22.2.99ರವರೆಗೆ ಈ ಕಾರ್ಖಾನೆಯು ಒಟ್ಟು 2,84,480 ಟನ್ ಕಬ್ಬನ್ನು ಅರೆದಿದ್ದಾರೆ.

ಮಾಗಡಿ ಪಟ್ಟಣದಲ್ಲಿ ಅಂಬೇಡ್ಕರ್ ಭವನ ನಿರ್ಮಾಣ.

73(266) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95, 95-96, 96-97, 97-98, 98-99ನೇ ಸಾಲಿನಲ್ಲಿ ಮಾಗಡಿ ಕ್ಷೇತ್ರದ ವ್ಯಾಪ್ತಿಯಲ್ಲಿ ಆರಂಭಿಸಿದ ಹೊಸ ಹಾಸ್ಟೆಲ್‌ಗಳು ಯಾವುವು? ನಿರ್ಮಾಣವಾದ ಹಾಸ್ಟೆಲ್ ಕಟ್ಟಡಗಳು ಹಾಗೂ ಈ ಬಗ್ಗೆ ಮಂಜೂರಾದ ಕಾಮಗಾರಿಗಳು ಯಾವುವು? ಇದಕ್ಕೆ ತಗುಲಿದ ವೆಚ್ಚವೆಷ್ಟು (ವಿವರ ನೀಡುವುದು);